**Kannada Prabha ePaper**
**Title :**
**Author :**
**Location :**
**Article Date : 11/09/2014**

ಸಂಡೆ ಸಂದರ್ಶನ



• ವಿಶ್ವಾಮಿತ್ರ ಹೆಗಡೆ, ಕನ್ನಡಪ್ರಭ

# ಕೆರೆ ಕಾಯ್ದುಕೊಂಡರೆ ನದಿ ತಿರುವು ಬೇಕಾಗದು

**ರಾಷ್ಟ್ರೀಯ ಮಟ್ಟದ ಕೆರೆ ಸಮ್ಮೇಳನ ನ.13, 14 ಹಾಗೂ 15ರಂದು ಶಿರಸಿ ತಾಲೂಕಿನ ಸೋಂದಾ ಸ್ವರ್ಣವಲ್ಲಿ ಮಠದಲ್ಲಿ ನಡೆಯಲಿದೆ. ಭಾರತೀಯ ವಿಜ್ಞಾನ ಸಂಸ್ಥೆ ಕೆರೆ ಸಮ್ಮೇಳನದ ಆಯೋಜನೆಯಲ್ಲಿ ಪ್ರಮುಖ ಪಾತ್ರ ವಹಿಸಿದೆ. ಈ ಕುರಿತಂತೆ ಭಾರತೀಯ ವಿಜ್ಞಾನ ಸಂಶೋಧನಾ ಸಂಸ್ಥೆ ಬೆಂಗಳೂರು ಇದರ ವಿಜ್ಞಾನಿ ಡಾ. ಟಿ. ವಿ. ರಾಮಚಂದ್ರ ಅವರನ್ನು ಸಂದರ್ಶಿಸಲಾಯಿತು.**

**• ಕೆರೆ ಸಮ್ಮೇಳನದ ಅಗತ್ಯವೇನು? ಈ ವರೆಗೆ ನಡೆಸಲಾದ ಕೆರೆ ಸಮ್ಮೇಳನದ ಫಲಶೃತಿಗಳೇನು?**

ಕೆರೆ ಸಮ್ಮೇಳನ ರಾಷ್ಟ್ರೀಯ ಮಟ್ಟದಲ್ಲಿ ನಡೆಸಲಾಗುತ್ತಿದೆ. ಈ ವರೆಗೆ ಪ್ರತಿ ಎರಡು ವರ್ಷಕ್ಕೊಮ್ಮೆ ದೇಶದ ಬೇರೆ ಬೇರೆ ಭಾಗಗಳಲ್ಲಿ ಕೆರೆ ಸಮ್ಮೇಳನ ನಡೆಸಲಾಗಿದೆ. ಅಂತರ್ಜಲ ನಿರ್ವಹಣೆಯಲ್ಲಿ ಕೆರೆಯ ಪಾತ್ರ ಪ್ರಮುಖವಾಗಿದೆ. 2004ರಲ್ಲಿ ಭುವನೇಶ್ವರದಲ್ಲಿ ಕೆರೆ ಸಮ್ಮೇಳನ ನಡೆಯಿತು. ಬೆಂಗಳೂರಿನಲ್ಲಿ 2006, 08 ಹಾಗೂ 2010ರಲ್ಲಿ ಸಮ್ಮೇಳನ ಆಯೋಜಿಸಲಾಗಿತ್ತು. 2012ರಲ್ಲಿ ಕೇರಳದ ಕೊಟ್ಟಾಯಂನಲ್ಲಿ ನಡೆಯಿತು. ಈ ವರ್ಷ ಉತ್ತರ ಕನ್ನಡ ಜಿಲ್ಲೆಯ ಶಿರಸಿಯಲ್ಲಿ ನ.13, 14, 15ರಂದು ನಡೆಯಲಿದ್ದು ಕೆರೆ ಅಧ್ಯಯನದಲ್ಲಿ ಪಾಲ್ಗೊಂಡ ಹಲವಾರು ತಜ್ಞರು ಪಾಲ್ಗೊಂಡು ಈ ವರೆಗಿನ ಅಧ್ಯಯನ ವರದಿಯನ್ನು ಮಂಡಿಸಲಿದ್ದಾರೆ. ಉತ್ತರ ಕನ್ನಡ ಜಿಲ್ಲೆ ಪರಿಸರ ಸಂಬಂಧಿಯಾಗಿ ಸೂಕ್ಷ್ಮ ವಲಯದಲ್ಲಿ ಗುರುತಿಸಿಕೊಂಡಿದೆ. ಹಾಗಾಗಿ ಕಳೆದ ಮೂರು ವರ್ಷದಿಂದ ಜಿಲ್ಲೆಯ ಧಾರಣಾ ಸಾಮರ್ಥ್ಯವನ್ನು ಅಧ್ಯಯನ ಮಾಡಲಾಗಿದ್ದು ಈ ಸಮ್ಮೇಳನ ಅದರ ಕೊನೆಯ ಹಂತವಾಗಿದೆ. ಈ ಸಮ್ಮೇಳನದ ಮೂಲಕ ಧಾರಣಾ ಸಾಮರ್ಥ್ಯದ ವರದಿಯೂ ಸೇರಿದಂತೆ ಹಲವಾರು ಅಧ್ಯಯನ ವರದಿಯನ್ನು ಜನಸಾಮಾನ್ಯರಿಗೆ ತಿಳಿಸುವುದು ಸಮ್ಮೇಳನದ ಒಂದು ಭಾಗವಾಗಿದೆ. ಸಮ್ಮೇಳನದಲ್ಲಿ 35 ಅಧ್ಯಯನ ವರದಿ ಬಿಡುಗಡೆ ಮಾಡಲಾಗುತ್ತದೆ.

**• ಸಮ್ಮೇಳನಗಳ ಫಲಶೃತಿ ಏನು? ತೃಪ್ತಿ ತಂದಿದೆಯಾ?**

1998ರಲ್ಲಿ ಮೊಟ್ಟಮೊದಲ ಬಾರಿಗೆ ಸಮ್ಮೇಳನ ಮಾಡಿದಾಗ ಕೆಲವು ಶಾಲೆಗಳು ನಮ್ಮ ಜೊತೆಗೆ ಬಂದಿದ್ದವು. ಇದೀಗ ಕರ್ನಾಟಕದ 29 ಶಾಲೆಗಳು ನಮ್ಮ ಪ್ರಯೋಗಗಳು ಹಾಗೂ ಅಧ್ಯಯನಗಳಲ್ಲಿ ಪಾಲ್ಗೊಳ್ಳುತ್ತಿವೆ. ಈ ಮಕ್ಕಳಿಗೆ ತರಬೇತಿ, ಶಿಕ್ಷಣ ನೀಡಲಾಗುತ್ತದೆ. ಮಕ್ಕಳಿಗೆ ತರಬೇತಿ ಕೊಟ್ಟ ನಂತರ ಸ್ಪರ್ಧೆಗಳನ್ನು ನಡೆಸಲಾಗುತ್ತದೆ. ಸಮ್ಮೇಳನದಲ್ಲಿ ಭಾಗವಹಿಸಿದ ಮಕ್ಕಳು ವಿಜ್ಞಾನದಲ್ಲಿ ಮುಂದುವರಿದಿದ್ದಾರೆ. ಕೆಲವು ವಿದ್ಯಾರ್ಥಿಗಳು ಪಿಎಚ್‌ಡಿ ಮಾಡಿದ್ದಾರೆ. ಇನ್ನೂ ಹಲವರು ನಮ್ಮ ಸಂಸ್ಥೆಯ ಅಧ್ಯಯನ ವಿದ್ಯಾರ್ಥಿಯಾಗಿ ಕೆಲಸ ಮಾಡುತ್ತಿದ್ದಾರೆ. ನಮ್ಮ ಸಂಶೋಧನಾ ವಿದ್ಯಾರ್ಥಿಯೊಬ್ಬ ಬೆಂಗಳೂರಿನ ಕೆರೆ ಕಲ್ಮಷದ ಕುರಿತಂತೆ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ ದಾಖಲಿಸಿದ್ದರು. ಆ ಸಂದರ್ಭದಲ್ಲಿ ನ್ಯಾಯಾಧೀಶರು ಸಮಿತಿ ಮಾಡಬೇಕೆಂದು ತೀರ್ಮಾನಿಸಿದ್ದರು. ಸಲಹೆ ನೀಡಲು ನ್ಯಾಯಾಲಯಕ್ಕೆ ಕರೆ ಬಂದಿತ್ತು. ಆ ಸಂದರ್ಭದಲ್ಲಿ ಕೆರೆಗೆ ಸಂಬಂಧಪಟ್ಟಂತಹ 2010ರ ಅಧ್ಯಯನ ವರದಿಯನ್ನು ನ್ಯಾಯಾಲಯದ ಮುಂದೆ ಪ್ರಸ್ತುತ ಪಡಿಸಿದಾಗ ಸಮಿತಿಯ ಅವಶ್ಯಕತೆಯಿಲ್ಲ. ಮತ್ತು ಈ ಅಧ್ಯಯನ ವರದಿಯನ್ನು ಕಾರ್ಯಗತ ಮಾಡಿದರೆ ಕೆರೆಗಳನ್ನು ಉಳಿಸಬಹುದು ಎಂದು ಅಭಿಪ್ರಾಯ ಪಟ್ಟರು. ಬೆಂಗಳೂರಿನಲ್ಲಿರುವ ಕೆರೆಗಳ ವಿಸ್ತೀರ್ಣ ಗೊತ್ತಿರಲಿಲ್ಲ, ಅದರ ಹಕ್ಕಿನ ಬಗೆಗೂ ಮಾಹಿತಿ ಇರಲಿಲ್ಲ. ಕೆರೆಗಳ ಒತ್ತುವರಿ ಅಧಿಕಗೊಳ್ಳುತ್ತಲಿತ್ತು. ಈಗ ಬೇಲಿಯನ್ನು ಹಾಕಲಾಗಿದೆ. ಪ್ರತಿಯೊಂದು ಕೆರೆಗಳ ಸರ್ವೆ ಕಾರ್ಯ ನಡೆಯುತ್ತಿದೆ. ಕೆರೆಗಳು ಪುನಶ್ಚೇತನಗೊಂಡಿವೆ. ಜಕ್ಕೂರಿನ ಕೆರೆಗೆ ಚರಂಡಿ ನೀರು ಸೇರ್ಪಡೆಯಾಗುತ್ತಿತ್ತು. ಶೌಚಾಲಯದ ನೀರನ್ನು ನೇರವಾಗಿ ಕೆರೆಗಳಿಗೆ ಬಿಡಲಾಗುತ್ತಿತ್ತು. ಚರಂಡಿ ನೀರು ನೇರವಾಗಿ ಕೆರೆಯನ್ನು ಸೇರುತ್ತಿದ್ದ ಕಾರಣ ಕೆರೆಗಳಲ್ಲಿ ಸಾರಜನಕ ಹಾಗೂ ರಂಜಕದ ಪ್ರಮಾಣ ಹೆಚ್ಚಾಗುತ್ತಿದ್ದ ಕಾರಣದಿಂದ ನೀರು ಕಲ್ಮಷಗೊಳ್ಳುತ್ತಿತ್ತು. ಕೆರೆಯಲ್ಲಿನ ಆಹಾರ ಚಕ್ರಕ್ಕೆ ಧಕ್ಕೆಯುಂಟಾಗಿ ಉಪಯೋಗಿಸಲು ಬಾರದಂತಾಗುತ್ತಿತ್ತು. ಇದಕ್ಕೆ ನಾವು ಸ್ಯೂಯೇಜ್ ಟ್ರೀಟ್‌ಮೆಂಟ್ ಪ್ಲಾಂಟ್ ಕೊಟ್ಟಿದ್ದೇವೆ. ಅದು ಯಶಸ್ವಿಯಾಗಿದೆ.

**• ಹಾಳುಬಿದ್ದಿರುವ ಆದರೆ ಆ ಪ್ರದೇಶಕ್ಕೆ ಅಂತರ್ಜಲ ಮಟ್ಟವನ್ನು ಹೆಚ್ಚಿಸುವಂತಹ ಕೆರೆಗಳನ್ನು ಗಮನಿಸಿದ್ದೀರಾ? ಹಾಗಿದ್ದರೆ ಅವುಗಳ ಈಗಿನ ಪರಿಸ್ಥಿತಿಗಳೇನು? ಅಂಥವುಗಳು ಎಲ್ಲೆಲ್ಲಿವೆ?**

ಕೆರೆಗಳೆಂದರೆ ಮಲಿನಗೊಂಡಿರುವ ನೀರನ್ನು ಶುದ್ಧೀಕರಣ ಮಾಡುವ ಘಟಕ ಎನ್ನಬಹುದಾಗಿದೆ. ಮನುಷ್ಯನ ದೇಹದಲ್ಲಿ ಕಿಡ್ನಿ ಯಾವ ರೀತಿ ಕೆಲಸ ಮಾಡುತ್ತದೆಯೋ ಅದೇ ಕೆಲಸವನ್ನು ಕೆರೆ ಮಾಡುತ್ತದೆ. ಅಂತರ್ಜಲ ಮಟ್ಟ 800 ರಿಂದ 1000 ಅಡಿ ತಲುಪಿದ ಪ್ರದೇಶಗಳಲ್ಲಿ ಫ್ಲೋರೈಡ್ ಪ್ರಮಾಣ ಹೆಚ್ಚಿಗೆ ಕಂಡುಬಂದಿದೆ. ಇದಕ್ಕೆ ಕೋಲಾರ ತಾಲೂಕನ್ನು ಉದಾಹರಿಸಬಹುದು. ಕೋಲಾರ ತಾಲೂಕಿನಿಂದ 45 ಕಿ.ಮಿ ದೂರದಲ್ಲಿರುವ ಮಾಲೂರಿನಲ್ಲಿ ಅಂತರ್ಜಲ ಮಟ್ಟ 200-250 ಅಡಿ ಇದೆ. ಅಲ್ಲಿ ಫ್ಲೋರೈಡ್ ಅಂಶ ಕಂಡುಬಂದಿಲ್ಲ. ಕೋಲಾರ ಅಥವಾ ನೀರಿನ ಅಭಾವ ಎದುರಿಸುತ್ತಿರುವ ಪ್ರದೇಶದಲ್ಲಿ ಮೇಲ್ಮೈ ಹಸಿರು ಇಲ್ಲ. ಇದರಿಂದಾಗಿ ಅಂತರ್ಜಲಕ್ಕೆ ನೀರು ಮರುಪೂರಣವಾಗುತ್ತಿಲ್ಲ. ಅಕೇಸಿಯಾ, ಯೂಕಲಿಪ್ಟಸ್ ಹೊರತುಪಡಿಸಿ ಬಹುಜಾತೀಯ ಸಸ್ಯಗಳಿರುವ ಪ್ರದೇಶದಲ್ಲಿ ಮತ್ತು ಹುಲ್ಲುಗಾವಲು ಇರುವಂತಲ್ಲಿ ನೀರು ಸುಲಭವಾಗಿ ಅಂತರ್ಜಲಕ್ಕೆ ತಲುಪುತ್ತದೆ. ಬೆಂಗಳೂರಿನಲ್ಲಿ 1976ರಲ್ಲಿ 273 ಕೆರೆಗಳಿದ್ದವು. ಈಗ 93 ಕೆರೆಗಳಿವೆ. ಕೆರೆಗಳ ಗಾತ್ರ ಮತ್ತು ಸಂಖ್ಯೆ ಕಡಿಮೆ ಆಗುತ್ತಿದ್ದ ಹಾಗೇ ಸುತ್ತಲಿನ ಬಾವಿಗಳ ನೀರು ಕಲುಷಿತವಾಗುತ್ತಿದೆ. ಕೆರೆ ಕಲುಷಿತಗೊಂಡಾಗಲೂ ಸನಿಹದ ಬಾವಿಗಳ ನೀರಲ್ಲಿ ಮಲಿನತೆ ಕಂಡುಬಂದಿದೆ. ಅಲ್ಲಿ ಕ್ಯಾನ್ಸರ್ ಕಾರಕ ಅಂಶಗಳು ಹೆಚ್ಚಾಗುತ್ತಿವೆ.

**• ಕೆರೆ ಸಮ್ಮೇಳನ ಮತ್ತು ಅಧ್ಯಯನದಿಂದ ಸಾರ್ವಜನಿಕರಲ್ಲಿ ಜಾಗೃತಿ ಉಂಟಾಗಿದೆಯೇ? ಪ್ರಯೋಜನಗಳೇನಾಗುತ್ತಿವೆ?**

ಕೆರೆ ಒತ್ತುವರಿ ಸಂದರ್ಭದಲ್ಲಿ ಸ್ಥಳೀಯರು ಮಾಹಿತಿ ನೀಡುತ್ತಿದ್ದಾರೆ. ಬೆಳ್ಳಂದೂರು ಮತ್ತು ಆಗರಂ ಕೆರೆ ನಡುವೆ ಬಿಲ್ಡರ್ ಒಬ್ಬರು ಒತ್ತುವರಿ ಮಾಡಲು ಯತ್ನಿಸಿದಾಗ ಅದನ್ನು ನ್ಯಾಯಾಲಯದ ಮೂಲಕ ತಡೆಯಲಾಗಿದೆ. ವಿಧಾನಸಭೆಯಲ್ಲಿ ನಮ್ಮ ಅಧ್ಯಯನ ಫಲಕೊಡದಿದ್ದರೂ ನ್ಯಾಯಾಲಯದಲ್ಲಿ ಫಲ ಸಿಕ್ಕಿದೆ. ಕೆಲವು ಹಳ್ಳಿಗಳಲ್ಲಿ ಸ್ಥಳೀಯರೇ ಕೆರೆ ನಿರ್ವಹಣೆ ಮಾಡುತ್ತಿದ್ದು ಅಂತಹ ಕೆರೆಗಳು ಪರಿಪೂರ್ಣವಾಗಿದೆ. ಕೆರೆಯ ನೀರು ಕುಡಿಯಲು ಯೋಗ್ಯವಾಗಿದೆ. ಸ್ಥಳೀಯರು ಕೆರೆಗಳ ನಿರ್ವಹಣೆ ಮಾಡುತ್ತಿದ್ದ ಸಂದರ್ಭದವರೆಗೆ



ಇಂದಿನ ಪ್ರಮಾಣಕ್ಕೆ ಹೋಲಿಸಿದಾಗ ಒತ್ತುವರಿಯೂ ಹೆಚ್ಚಾಗಿರಲಿಲ್ಲ. ಕೆರೆಯ ನೀರು ಶುದ್ಧವಾಗಿರುತ್ತಿತ್ತು. ಸರ್ಕಾರದ ಹಸ್ತಕ್ಷೇಪ ಆಗುತ್ತಿದ್ದಂತೆ ಕೆರೆಯ ಒತ್ತುವರಿಯೂ ಪ್ರಾರಂಭವಾಯಿತು. ಆಗ ಸ್ಥಳೀಯರೂ ಕೆರೆ ನಿರ್ವಹಣೆಯಿಂದ ವಿಮುಖರಾದರು. ಈಗ ಅಂದರೆ ಕಳೆದ 18 ವರ್ಷಗಳಿಂದ ಅಧ್ಯಯನ ಮತ್ತು ಸಮ್ಮೇಳನಗಳ ಮೂಲಕ ಜನಜಾಗೃತಿ ಉಂಟಾಗುತ್ತಿದೆ. ಅಧ್ಯಯನಕ್ಕೆ ವಿದ್ಯಾರ್ಥಿಗಳನ್ನು ತೊಡಗಿಸಿಕೊಳ್ಳುವ ಮೂಲಕ ಅವರ ಮನೆಯವರು, ಅಕ್ಕಪಕ್ಕದವರೂ ಸಹ ಕೆರೆ ರಕ್ಷಣೆಗೆ ಮುಂದಾಗುತ್ತಿದ್ದಾರೆ. ಹಾಗಾಗಿ ಕೆರೆಯ ಕುರಿತಂತೆ ಜಾಗೃತಿ ಉಂಟಾಗುತ್ತಿದೆ. ಸಾರ್ವಜನಿಕರಿಗೂ ಪ್ರಯೋಜನವಾಗುತ್ತಿದೆ.

**• ಹೈಟೆನ್ಶನ್ ವಿದ್ಯುತ್ ಮಾರ್ಗದ ಕೆಳಭಾಗದಲ್ಲಿ ಇಂಗುಗುಂಡಿ ಮಾಡುವುದರ ಮೂಲಕ ಅಂತರ್ಜಲಮಟ್ಟ ಹೆಚ್ಚಿಸಬಹುದು. ಆದರೆ ಜಲಾನಯನ, ಅರಣ್ಯ ಇಲಾಖೆ ಸೇರಿದಂತೆ ಸರ್ಕಾರಿ ವ್ಯವಸ್ಥೆಯಲ್ಲಿ ಬೆಳೆದು ನಿಂತ ಮರಗಿಡಗಳನ್ನು, ಕುರುಚಲು ಸಸ್ಯಗಳನ್ನು ಕಡಿದು ಇಂಗುಗುಂಡಿ ಮಾಡಲಾಗುತ್ತಿದೆ. ಇದು ಅವೈಜ್ಞಾನಿಕವಲ್ಲವೇ?**

ಇಂಗುಗುಂಡಿ ಅಗತ್ಯ ಖಂಡಿತ ಇದೆ. ಎಲ್ಲೆಲ್ಲಿ ಹಸಿರು ಹುಲ್ಲಿನ ಹೊದಿಕೆಯಿರುತ್ತದೋ ಅಂತಲ್ಲಿ ಅಂತರ್ಜಲಮಟ್ಟ ಹೆಚ್ಚಿರುತ್ತದೆ. ಹೈಟೆನ್ಶನ್ ವಿದ್ಯುತ್ ಮಾರ್ಗದ ಕೆಳಬದಿಯಲ್ಲಿ ಹುಲ್ಲುಗಾವಲನ್ನು ಹೆಚ್ಚಿಸಬೇಕಾಗಿದೆ. ದನಗಳಿಗೆ ಮೇವು ಒದಗಿಸಿದಂತೆಯೂ ಆಗುತ್ತದೆ. ಜೊತೆ ಜೊತೆಯಲ್ಲಿ ನೀರು ಇಂಗುವ ಪ್ರಮಾಣವೂ ಹೆಚ್ಚಾಗುತ್ತದೆ. ಇಂಗುಗುಂಡಿಗಾಗಿಯೇ ಸ್ಥಳೀಯವಾಗಿರುವ ಕುರುಚಲು ಸಸ್ಯಗಳಾಗಲಿ, ಮರಗಿಡಗಳನ್ನೇ ಕಡಿದು ಇಂಗುಗುಂಡಿ ಮಾಡುವುದಕ್ಕಿಂತ ಈ ರೀತಿಯ ವಿದ್ಯುತ್ ಮಾರ್ಗದ ಅಡಿಯಲ್ಲಿ ಹುಲ್ಲನ್ನು ಬೆಳೆಸುವ ಮೂಲಕ ಮತ್ತು ಹುಲ್ಲು ಬೆಳೆಯದ ಪ್ರದೇಶದಲ್ಲಿ ಇಂಗುಗುಂಡಿಗಳನ್ನು ತೋಡುವ ಮೂಲಕ ನೀರನ್ನು ಹಿಡಿದಿಟ್ಟುಕೊಳ್ಳಬಹುದಾಗಿದೆ.

**• ಎತ್ತಿನಹೊಳೆ ಯೋಜನೆಗೆ ಚಾಲನೆ ದೊರೆತಿದೆ. ಈಗ ಶರಾವತಿ, ಅಘನಾಶಿನಿ ಮತ್ತು ಬೇಡ್ತಿ ನದಿಗಳ ತಿರುವುಗಳ ಪ್ರಸ್ತಾಪ ಕೇಳಿಬರುತ್ತಿದೆ. ಇದರಿಂದ ಕೋಲಾರ, ಚಿತ್ರದುರ್ಗದಂತಹ ಕಡಿಮೆ ಮಳೆ ಪ್ರದೇಶಗಳಿಗೆ ಸಮರ್ಪಕ ನೀರು ಪೂರೈಕೆ ಸಾಧ್ಯವೇ?**

ನದಿ ತಿರುವು ಯೋಜನೆಗಳೆಲ್ಲ ಶತಮೂರ್ಖರ ಯೋಜನೆಗಳು. ಹಿತಾಸಕ್ತರ ಲಾಭಕ್ಕಾಗಿ ರೂಪಿಸಿದ ಯೋಜನೆಗಳಾಗಿದೆ. ಎತ್ತಿನಹೊಳೆಯಲ್ಲಿ 24 ಟಿ.ಎಂ.ಸಿ ನೀರಿದೆ ಅದನ್ನು ತಿರುಗಿಸಿ ಬರ ಪ್ರದೇಶಗಳಿಗೆ ನೀಡುವುದು ಸರ್ಕಾರದ ಯೋಜನೆ. ಆದರೆ ಅಧ್ಯಯನದ ಪ್ರಕಾರ ಕೇವಲ 7 ಟಿ.ಎಂ.ಸಿ ನೀರಿದೆ. ಅದರಲ್ಲಿ 6.5 ಟಿ.ಎಂ.ಸಿ ನೀರು ಸ್ಥಳೀಯರಿಗೆ ಬೇಕಾಗುತ್ತದೆ. ಕೋಲಾರಕ್ಕೆ ನೀರು ಒಯ್ಯಲಾಗುವುದು ಎಂದು ಸರ್ಕಾರ ಹೇಳುತ್ತಿದೆ. ಅದರ ಅಗತ್ಯವಿಲ್ಲ. ಕೋಲಾರದಲ್ಲಿ 4350 ಕೆರೆಗಳಿವೆ. ಅದರ ಅಭಿವೃದ್ಧಿ ಮಾಡಿದರೆ ನದಿ ತಿರುವು ಯೋಜನೆಯ ಅಗತ್ಯವೇ ಇರುವುದಿಲ್ಲ. ಬಿಲ್ಡರ್ ಮತ್ತು ಕಾಂಟ್ರಾಕ್ಟರ್‌ಗಳಿಗೆ ಮಾತ್ರ ನದಿ ತಿರುವು ಯೋಜನೆ ಬೇಕಾಗಿದೆ. ಇದಕ್ಕೆ ಜ್ವಲಂತ ನಿದರ್ಶನವೆಂದರೆ ತೆಲಗು ಗಂಗಾ ಯೋಜನೆಯಾಗಿದೆ. ತಮಿಳುನಾಡಿನ ನೆಲ್ಲೂರಿನಲ್ಲಿ ಕೆರೆ ಅಭಿವೃದ್ಧಿ ಮಾಡಿದ ಸಂದರ್ಭದಲ್ಲಿ ಮೂರು ಬೆಳೆ ತೆಗೆಯಲಾಗುತ್ತಿತ್ತು. ಆದರೆ ತೆಲಗು ಗಂಗಾ ಯೋಜನೆ ಅನುಷ್ಠಾನಗೊಂಡ ನಂತರ ಒಂದು ಬೆಳೆ ಬೆಳೆಯುವುದೂ ಕಷ್ಟವಾಗಿದೆ. ನದಿ ತಿರುವು ಯೋಜನೆ ರೂಪಿತವಾದರೆ ತೆಲಗು ಗಂಗಾ ಸಮಸ್ಯೆ ಕರ್ನಾಟಕದಲ್ಲೂ ಮರುಕಳಿಸಿದರೆ ಅಚ್ಚರಿಯಿಲ್ಲ.

**• ಕಡಿಮೆ ಮಳೆ ಬೀಳುವ ಮತ್ತು ಘೋಷಿತ ಬರ ಪ್ರದೇಶಗಳಿಗೆ ನೀರು ಪೂರೈಕೆ ಹೇಗೆ ಮಾಡಬಹುದು?**

ರಾಜಸ್ಥಾನದಲ್ಲಿ ಮರುಭೂಮಿ ಪ್ರದೇಶದಲ್ಲಿ ಯಾವ ರೀತಿ ನೀರಿನ ಸಂಗ್ರಹಣೆ ಮಾಡಲಾಗುತ್ತಿದೆಯೋ ಅದೇ ರೀತಿಯ ಯೋಜನೆಯನ್ನು ರಾಜ್ಯದ ಬರ ಪೀಡಿತ ಪ್ರದೇಶಕ್ಕೆ ಅಳವಡಿಸಿದರೆ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದಾಗಿದೆ. ಹಾಲಿ ಪರಿಸ್ಥಿತಿಯಲ್ಲಿ ಕೋಲಾರದ ಬೆಳೆ ಬೆಳೆಯುವ ಭೂಮಿ ಬಂಜರಾಗಿದೆ. ಕಳೆದ 4 ದಶಕಗಳಿಂದ ಭೂಮಿ ಹಾಳುಬಿದ್ದಿದೆ. ಇದು ಅತ್ಯಂತ ಅಪಾಯಕಾರಿಯಾದ ಸಂಗತಿಯಾಗಿದ್ದು ಇದನ್ನು ತುರ್ತಾಗಿ ಸರಿಪಡಿಸಬೇಕಾಗಿದೆ. ಕೆರೆ ಅಭಿವೃದ್ಧಿಯ ಮೂಲಕವೇ ಇಂತಹ ಹಾಳುಬಿದ್ದಿರುವ ಭೂಮಿಯನ್ನು ಸರಿಪಡಿಸಬಹುದಾಗಿದೆ.

**• ಮಲೆನಾಡು ಮತ್ತು ಪಶ್ಚಿಮಘಟ್ಟ ಪ್ರದೇಶಗಳಲ್ಲಿ ಪದೇ ಪದೆ ಭಾರಿ ಪ್ರಮಾಣದ ಭೂಕುಸಿತ ಉಂಟಾಗುತ್ತಿದೆ. ಇದಕ್ಕೆ ಪರಿಹಾರವೇನು?**

2009ರಲ್ಲಿ ಕಾರವಾರದಲ್ಲಿ ಭೂಕುಸಿತ ಉಂಟಾದಾಗ ನಾವೇ ಸರ್ಕಾರಕ್ಕೆ ಅಧ್ಯಯನ ವರದಿಯನ್ನು ಕೊಟ್ಟಿದ್ದೆವು. ಮಾನವನ ಸ್ವಯಂಕೃತ ಅಪರಾಧದಿಂದಾಗಿ ಅಂದರೆ ಅರಣ್ಯ ನಾಶ, ನೆಡುತೋಪು ನಿರ್ಮಾಣ, ಗುಡ್ಡ ಕತ್ತರಿಸಿ ಮನೆ ನಿರ್ಮಿಸುವುದು ಈ ಎಲ್ಲ ಕಾರಣಗಳಿಂದಾಗಿ ಭೂಕುಸಿತ ಉಂಟಾಗುತ್ತಿದೆ. ಮರಗಳು ಭೂಮಿಯನ್ನು ಹಿಡಿದಿಟ್ಟುಕೊಳ್ಳುತ್ತಿದ್ದವು. ಅಂತಹ ಮರಗಳನ್ನೇ ಕತ್ತರಿಸುತ್ತಿರುವ ಸಂದರ್ಭಗಳಲ್ಲಿ ಮತ್ತು ಕೆಂಪು ಕಲ್ಲು ಗಣಿಗಾರಿಕೆಯಿಂದಾಗಿಯೂ ಭೂಕುಸಿತ ಉಂಟಾಗುತ್ತಿದೆ. ಸೂಕ್ಷ್ಮ ಪ್ರದೇಶಗಳಲ್ಲೇ ಇಂತಹ ಅವಘಡಗಳು ಸಂಭವಿಸುತ್ತಿದ್ದು ಇದಕ್ಕೆ ಕಟ್ಟುನಿಟ್ಟಿನ ಕ್ರಮದ ಅವಶ್ಯಕತೆಯಿದೆ. ಇಲ್ಲವಾದಲ್ಲಿ ಪಶ್ಚಿಮ ಘಟ್ಟ ಪ್ರದೇಶ ಮತ್ತೊಂದು ಉತ್ತರಾಖಂಡ ಆಗಬಹುದಾಗಿದೆ.

**• ಶುಂಠಿ ಬೆಳೆಯಿಂದ ಭೂಮಿ ಬಂಜರಾಗುತ್ತಿದೆ. ನೀರು ಮಲಿನಗೊಳ್ಳುತ್ತಿದೆ. ಇದಕ್ಕೆ ಪರಿಹಾರವೇನು?**

ಶುಂಠಿ ಬೆಳೆ ಬೆಳೆಯುವ ಪ್ರದೇಶದಲ್ಲಿ ಭೂಮಿ ಬಂಜರಾಗುವುದು ನಮ್ಮ ಗಮನಕ್ಕೆ ಬಂದಿದೆ. ಸನಿಹದಲ್ಲಿರುವ ಕೆರೆ ಅಥವಾ ಹಳ್ಳ, ನದಿಗಳ ನೀರು ಬಳಕೆಗೆ ಪೂರಕವಾಗಿಲ್ಲ. ವಿಷಕಾರಿ ಅಂಶಗಳಿರುವುದು ಪತ್ತೆಯಾಗಿದೆ. ಶುಂಠಿಗೆ ಹಾಕುವ ಅತಿಯಾದ ರಾಸಾಯನಿಕ ಗೊಬ್ಬರಗಳು, ಮತ್ತು ಶುಂಠಿ ಬೆಳೆಗೆ ಸಿಂಪಡಿಸುವ ವಿಷಕಾರಿ ಕೀಟನಾಶಕಗಳು ಅಂತರ್ಜಲ ಮಟ್ಟದವರೆಗೂ ತಲುಪುತ್ತಿದೆ. ಅಲ್ಲದೇ ಹೊಳೆ-ಹಳ್ಳಗಳಿಗೂ ಸೇರ್ಪಡೆಯಾಗುತ್ತಿದೆ. ಇದರಿಂದಾಗಿ ಆಹಾರ ಸರಪಳಿಯೇ ಹಾಳಾಗುತ್ತಿದೆ. ಮನುಷ್ಯರು ನದಿಗಳ ನೀರನ್ನು ಬಳಕೆ ಮಾಡಿದರೆ, ಜಲಚರಗಳನ್ನು ಆಹಾರವಾಗಿ ಬಳಸಿದರೆ ವ್ಯತಿರಿಕ್ತ ಪರಿಣಾಮ ಉಂಟಾಗುತ್ತಿದೆ. ಕೆರೆ, ನದಿ, ಹಳ್ಳ ಸೇರಿದಂತೆ ಜಲಮೂಲಗಳು ಕಲುಷಿತವಾಗುತ್ತಿರುವ ಕಾರಣದಿಂದಾಗಿ ಕಿಡ್ನಿ ವೈಫಲ್ಯತೆ ಹೆಚ್ಚುತ್ತಿದೆ. ಈ ಮೊದಲು 5 ಲಕ್ಷಕ್ಕೆ ಒಬ್ಬರಿಗೆ ಕಿಡ್ನಿ ವೈಫಲ್ಯ ಆಗುತ್ತಿದ್ದರೆ ಈಗ 5 ಸಾವಿರ ಜನರಲ್ಲಿ ಒಬ್ಬರಿಗೆ ಕಿಡ್ನಿ ಸಮಸ್ಯೆ ಕಂಡುಬರುತ್ತಿದೆ. ಈ ಎಲ್ಲ ಅವಾಂತರಗಳಿಂದಾಗಿ ಮುಂದಿನ ತಲೆಮಾರಿನ ಜನರು ಭಾರಿ ಪ್ರಮಾಣದ ಬೆಲೆ ತೆರಬೇಕಾಗುತ್ತದೆ.